# ಭಗವಂತನ ಸಾವು

ಕೆ.ಆರ್. ಮೀರಾ ಮಲಯಾಳಂನ ಪ್ರಸಿದ್ಧ ಕಥೆಗಾರ್ತಿ. ಪತ್ರಕರ್ತೆಯಾಗಿಯೂ ಕಾರ್ಯ ನಿರ್ವಹಿಸಿದವರು. 'ಭಗವಾಂಟೆ ಮರಣಂ' ಅವರ ಪ್ರಸಿದ್ಧ ಕೃತಿ.

ಕನ್ನಡ ಲೇಖಕ ಎಂ.ಎಂ. ಕಲಬುರ್ಗಿ ಅವರ ಕೊಲೆ ಆಧುನಿಕ ಕನ್ನಡ ಸಾಹಿತ್ಯದ ಕರಾಳ ಅಧ್ಯಾಯಗಳಲ್ಲೊಂದು. ತಾತ್ವಿಕ ಭಿನ್ನಾಭಿಪ್ರಾಯಗಳು ಕೊಲೆಗೂ ಕಾರಣವಾಗಬಹುದು ಎನ್ನುವುದಕ್ಕೆ ಎಂ.ಎಂ. ಕಲಬುರ್ಗಿ ಹಾಗೂ ಗೌರಿ ಲಂಕೇಶ್ ಅವರ ಕೊಲೆಗಳು ನಿದರ್ಶನದಂತಿವೆ. ಈ ಕೊಲೆಗಳಿಗೆ ಕನ್ನಡದ ಸಾಹಿತ್ಯ ವಲಯ ಸಾಹಿತ್ಯದ ಮೂಲಕ ಸ್ಪಂದಿಸಿದ್ದು ಹೇಗೆ? ಈ ಪ್ರಶ್ನೆಯನ್ನು ಓದುಗರಿಗೆ ಬಿಟ್ಟು, ಕನ್ನಡದ ಬರಹಗಾರ–ಚಿಂತಕನ ಹತ್ಯೆಗೆ ಸ್ಪಂದಿಸುವ ಸೃಜನಶೀಲ ಸವಾಲನ್ನು ಕೈಗೆತ್ತಿಕೊಂಡಿರುವ ರೂಪದಲ್ಲಿ ಕೆ.ಆರ್. ಮೀರಾ ಅವರ ಕಥೆಗಳನ್ನು ಗಮನಿಸಬಹುದು.




ಮಲಯಾಳಂನ 'ಭಗವಾಂಟೆ ಮರಣಂ' ಕೃತಿಯ ವಿನ್ಯಾಸವೇ ಕಥನವನ್ನು ಹೇಳುವಂತಿತ್ತು. ಪುಸ್ತಕದ ಕೇಂದ್ರದಲ್ಲಿ, ನೆತ್ತರಕೆಂಪಿನಿಂದ ಆವೃತ್ತವಾಗಿದ್ದ ಛಿದ್ರ ರಂಧ್ರ, ಹಣೆಯನ್ನು ಹೊಕ್ಕ ಬುಲೆಟ್ ಮಾಡಿದ ಮಾರಣಾಂತಿಕ ಗಾಯದಂತಿತ್ತು. ಆ ಗಾಯವೇ ಮೀರಾ ಅವರು ಹೇಳುತ್ತಿರುವುದೇನು ಎನ್ನುವುದನ್ನು ಸೂಚಿಸುವಂತಿತ್ತು. ಇದೀಗ ಮೀರಾ ಅವರ 'ಭಗವಾಂಟೆ ಮರಣಂ' ಕೃತಿ, 'ಭಗವಂತನ ಸಾವು' ಹೆಸರಿನಲ್ಲಿ ಕನ್ನಡ ಬಂದಿದೆ. ನೆರೆಭಾಷೆಯ ಪತ್ರಕರ್ತೆಯೊಬ್ಬರ ಕಥೆಗಳನ್ನು ಕನ್ನಡದ ಪತ್ರಕರ್ತನೊಬ್ಬ ಅನುವಾದಿಸಿರುವುದು ಕುತೂಹಲಕರ.

ಕಥೆಗಾರ್ತಿ ಪತ್ರಕರ್ತೆಯೂ ಆದಾಗ, ಕಥೆಗಳಿಗೆ ದೊರೆಯಬಹುದಾದ ವಿಶಿಷ್ಟ ಒಳನೋಟಗಳಿಗೆ ಹಾಗೂ ಸಮಕಾಲೀನತೆಗೆ 'ಭಗವಂತನ ಸಾವು' ಸಂಕಲನದ ಕಥೆಗಳು ಉದಾಹರಣೆಯಂತಿವೆ. ಪತ್ರಕರ್ತನ ಬರವಣಿಗೆಯಲ್ಲಿ ವರದಿಯಾಗಿ ಕಳೆದು ಹೋಗಬಹುದಾದ ಸಂಗತಿಗಳನ್ನು ಮೀರಾ ಅವರು ಕಥೆಗಳಾಗಿ ಕಲೆಯಾಗಿ ಪರಿವರ್ತಿಸಿದ್ದಾರೆ. 'ಈ ಸಂಕಲನದ ಕಥೆಗಳೆಲ್ಲವೂ ಕಾಲ್ಪನಿಕ' ಎಂದು ಸಂಕಲನದ ಆರಂಭದಲ್ಲಿ ಹೇಳಿರುವ ಕಥೆಗಾರ್ತಿ, ತಮ್ಮ ಮಾತನ್ನು ವಿಸ್ತರಿಸಿರುವುದು ಹೀಗೆ: 'ಬದುಕಿರುವ ಅಥವಾ ಕಾಲವಾಗಿರುವ ಯಾವುದಾದರೂ ವ್ಯಕ್ತಿಗಳ ಜೊತೆ ಇಲ್ಲಿನ ಪಾತ್ರಗಳು ಹೋಲುತ್ತವೆ ಎಂದಾದರೆ ಅದಕ್ಕೆ ನಾವು ಬದುಕಿರುವ ಕಾಲವೇ ಕಾರಣ.' ಕಲ್ಪನೆಯೇ ವರ್ತಮಾನವಾಗಿರುವ ಅಸಂಗತ ಸನ್ನಿವೇಶವನ್ನು ಕಥೆಗಳ ರೂಪದಲ್ಲಿ ಕಾಣಿಸುತ್ತಿರುವ ಮೀರಾ, ತಮ್ಮ ಬರವಣಿಗೆಯ ಮೂಲಕ ಈ ಹೊತ್ತಿನ ಬಿಕ್ಕಟ್ಟುಗಳಲ್ಲಿ ನಮ್ಮ ಪಾತ್ರವೇನು ಎನ್ನುವುದರ ಆತ್ಮಾವಲೋಕನಕ್ಕೆ ಒತ್ತಾಯಿಸುತ್ತಾರೆ. ಕೊನೆಯುಸಿರೆಳೆದ ಅಥವಾ ಕೊನೆಯುಸಿರೆಳೆಯುತ್ತಿರುವ ಇಲ್ಲಿನ ಭಗವಂತ ವ್ಯಕ್ತಿಯೋ ಶಕ್ತಿಯೋ ಮಾತ್ರವಲ್ಲ, ಸಹೃದಯನೊಳಗಿನ ಒಳ್ಳೆಯತನವೂ ಮಾನವೀಯ ಸ್ಪಂದನವೂ ಹೌದು. ಮನಸ್ಸಿನ ಜೀವಶಕ್ತಿಯಾದ ಅಂತಃಕರಣವನ್ನೇ ಕಳೆದುಕೊಂಡರೆ ನಮ್ಮ ಬದುಕು ಹೇಗಿರಬಹುದು ಎನ್ನುವುದರ ವಿಶ್ಲೇಷಣೆಗೆ ಮೀರಾ ಅವರ ಕಥೆಗಳು ಒದಗಿಬರುತ್ತವೆ.

ಶೀರ್ಷಿಕೆಯೂ ಆದ 'ಭಗವಂತನ ಸಾವು' ಸಂಕಲನದ ಮುಖ್ಯ ಕಥೆಯೂ ಆಗಿದೆ. ಕಲ್ಪನೆಯೆಂದು ಕಥೆಗಾರ್ತಿ ಹೇಳಿದರೂ, ಈ ಕಥೆ, ಪ್ರೊಫೆಸರ್ ಎಂ.ಎಂ. ಕಲಬುರ್ಗಿ ಅವರನ್ನು ನೆನಪಿಸುತ್ತದೆ. ಕಥೆಯಲ್ಲಿ ಪ್ರಾಧ್ಯಾಪಕರ ಅಂತ್ಯವೂ, ಕಲಬುರ್ಗಿಯವರ ಅಂತ್ಯವೂ ಒಂದೇ ಆಗಿರುವುದು ಕಾಕತಾಳೀಯವೇನಲ್ಲ. ಆದರೆ, ವರ್ತಮಾನದ ಘಟನೆಯನ್ನು ಮೀರಿ ಕಥೆ ಬೆಳೆಯುತ್ತದೆ. ಪ್ರೊಫೆಸರರನ್ನು ಕೊಲ್ಲಲು ಬಂದ ಅಮರನೆನ್ನುವ